ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ, ಬೆಂಗಳೂರು – 12

ಸಂಖ್ಯೆ ಪಪೂಶಿ;ಶೈ.ಶಾ/ಪ್ರ.ಪಿ.ಸಿ.;2016-17;2016 ದಿನಾಂಕ 29-08-2016

ಜ್ಞಾಪನ

ವಿಷಯ; 2016-17ನೇ ಶೈಕ್ಷಣಿಕ ಸಾಲಿನ ಪ್ರಥಮ ಪಿಯು ತರಗತಿಗೆ ದಾಖಲಾಗಿರುವ ವಿದ್ಯಾರ್ಥಿಗಳ ಮಾಹಿತಿಯನ್ನು ಆನ್ ಲೈನ್ ಮೂಲಕ ಗಣಕೀಕರಿಸುವ ಕುರಿತು.

ಉಲ್ಲೇಖ; 1. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇವರ ದಿನಾಂಕ24/08/2016ರ ಸಭಾ ನಿರ್ಣಯದಂತೆ .

2. ಜಂಟಿ ನಿರ್ದೇಶಕರು, ಶೈ.ಶಾಖೆ ಇವರ ಜ್ಞಾಪನ ದಿನಾಂಕ 25/08/2016.

– – –

2016-17ನೇ ಶೈಕ್ಷಣಿಕ ಸಾಲಿನ ಪ್ರಥಮ ಪಿಯುಸಿ ತರಗತಿಗಳಿಗೆ ಈಗಾಗಲೆ ದಾಖಲಾತಿ ಪ್ರಕ್ರಿಯೆಯು ಪೂರ್ಣಗೊಂಡಿದ್ದು, ದಾಖಲಾದ ವಿದ್ಯಾರ್ಥಿಗಳ ಸಂಪೂರ್ಣ ಮಾಹಿತಿಯನ್ನು ಆನ್ ಲೈನ್ ಮೂಲಕ ಗಣಕೀಕರಿಸಲು ಪ್ರಾಚಾರ್ಯರುಗಳಿಗೆ ಈಗಾಗಲೇ ತಿಳಿಸಲಾಗಿದೆ. ಈ ವಿಷಯಕ್ಕೆ ಸಂಬಂದಿಸಿದಂತೆ ಉಲ್ಲೇಖ 1ರ ಸಭೆಯಲ್ಲಿ ತೀರ್ಮಾನಿಸಿದಂತೆ ಉಲ್ಲೇಖ 2ರನ್ವಯ ಇಲಾಖೆಯ ನಾಲ್ಕು ಅಧಿಕಾರಿ/ಸಿಬ್ಬಂದಿಗಳ (ನೋಡಲ್ ಅಧಿಕಾರಿಗಳು)ಸಮಿತಿಯನ್ನು ನೇಮಿಸಿ ಜ್ಞಾಪನವನ್ನು ಹೊರಡಿಸಲಾಗಿದೆ. (ಅನುಬಂಧ 1ರಲ್ಲಿ ಇರುವಂತೆ)

ಸದರಿ ಸಮಿತಿಯು ವಿಭಾಗವಾರು ಮಾಹಿತಿಗಳನ್ನು ಪರಿಶೀಲಿಸಿ ಅದರಲ್ಲಿ ಕಂಡುಬರುವ ತಾಂತ್ರಿಕ ತೊಂದರೆಗಳನ್ನು ನಿವಾರಿಸಿ ಗಣಕೀಕರಿಸಿ ಕಾಲೇಜುಗಳಿಗೆ ಮಾಹಿತಿ ಒದಗಿಸಲು ಸೂಚಿಸಲಾಗಿದೆ.

ಮುಂದುವರಿಯುತ್ತಾ, 2016-17ನೇ ಸಾಲಿನ ಪ್ರಥಮ ಪಿಯುಸಿ ದಾಖಲಾತಿ ಮತ್ತು ಇತರ ಕಾರ್ಯಗಳ ಪೋರ್ಟಲ್ ಅಪ್ ಡೇಷನ್ ನಲ್ಲಿ ಉಂಟಾಗುವ ತಾಂತ್ರಿಕ ದೋಷಗಳನ್ನು ನಿವಾರಿಸಲು

ಹಾಗೂ ಗಣಕ ಶಾಖೆಯೊಂದಿಗೆ ನಿರಂತರ ಸಂಪರ್ಕದಲ್ಲಿದ್ದು ಸರಿಯಾದ ಮಾಹಿತಿಯನ್ನು ಒದಗಿಸಲು ಈ ಕೆಳಕಂಡ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.

| ಕ್ರ.ಸಂ. | ಸಿಬ್ಬಂದಿಯ ಹೆಸರು ಮತ್ತು ಹುದ್ದೆ | ಮೊ.ಸಂಖ್ಯೆ | ಷರಾ |
|---|---|---|---|
| 1 | ಶ್ರೀ ಮುತ್ತೇಗೌಡ, ಶಾಖಾಧಿಕಾರಿಗಳು | 9844905148 | ಕಛೇರಿ ವೇಳೆಯಲ್ಲಿ ಮಾತ್ರ ಸಂಪರ್ಕಿಸುವುದು |
| 2 | ಶ್ರೀ ಜಯರಾಮರೆಡ್ಡಿ, ಶಾಖಾಧಿಕಾರಿ (ನಿಯೋಜನೆ) | 9900521580 | |
| 3 | ಶ್ರೀ ಶ್ರೇಯಸ್, ದ್ವಿದಸ | 9886865488 | |

ಮೇಲ್ಕಂಡ ಅಧಿಕಾರಿ/ಸಿಬ್ಬಂದಿ ವರ್ಗದವರೊಂದಿಗೆ ಪರೀಕ್ಷಾ ವಿಭಾಗದ ಜಿಲ್ಲಾ ವಿಷಯ ನಿರ್ವಾಹಕರುಗಳೂ ಸಹಕರಿಸಿ, ಯಾವುದೇ ದೂರು ಬಾರದಂತೆ ಗಮನವಹಿಸಿ ಕಾರ್ಯನಿರ್ವಹಿಸಲು ಈ ಮೂಲಕ ಸೂಚಿಸಲಾಗಿದೆ. ಹಾಗೂ ಸದರಿ ಕಡತ ನಿರ್ವಹಣೆಯನ್ನು ಶ್ರೀಮತಿ ಶಶಿಕಲಾ, ಶಾಖಾಧಿಕಾರಿ (ಶೈಕ್ಷಣಿಕ ಶಾಖೆ)ಇವರಿಗೆ ಒಪ್ಪಿಸಿದೆ.

**ನಿರ್ದೇಶಕರ ಅನುಮೋದನೆ ಮೇರೆಗೆ**

ಜಂಟಿ ನಿರ್ದೇಶಕರು (ಪರೀಕ್ಷೆ)
ಪದವಿ ಪೂರ್ವ ಶಿಕ್ಷಣ ಇಲಾಖೆ

ಪ್ರತಿಯನ್ನು:

1. ಸಂಬಂದಿಸಿದ ನಿಯೋಜಿತ ಅಧಿಕಾರಿಗಳಿಗೆ/ಸಿಬ್ಬಂದಿಗಳಿಗೆ
2. ಶೈಕ್ಷಣಿಕ ಶಾಖೆ,ಗೆ / ಪದವಿ ಪೂರ್ವ ಶಿಕ್ಷಣ ಇಲಾಖೆ,
3. ಪರೀಕ್ಷಾ ಶಾಖೆ/ಗಣಕ ಶಾಖೆ ಪದವಿ ಪೂರ್ವ ಶಿಕ್ಷಣ ಇಲಾಖೆ
4. ಇ ಆಡಳಿತ ಶಾಖೆಗೆ ಕಳುಹಿಸುತ್ತಾ ಸದರಿ ಮಾಹಿತಿಯನ್ನು ಅಂತರ್ಜಾಲದಲ್ಲಿ ಪ್ರಕಟಿಸಲು ಕೋರಿದೆ
5. ಕಛೇರಿ ಪ್ರತಿ